## ಪದಬಂಧ




ಎಡದಿಂದ ಬಲಕ್ಕೆ

1. ಇಂಥ ಮೋಹಕ ಸಾಹಿತ್ಯ ರಚನೆಯ ಪ್ರಯತ್ನ ಇಡೀ ಗುಂಪಿನದು 4
3. ಆ ಪರಿವಾರದ ಪ್ರತಿಯೊಬ್ಬರದೂ ವರ್ತಕರದೇ ಕೆಲಸ 3
4. ಹುತಾತ್ಮರಾದವರ ಪಟ್ಟಿಯಲ್ಲಿ ಒಬ್ಬ ಕುದುರೆ ಸವಾರನೂ ಇದ್ದಾನೆ 3
6. ಚಪಲಚಿತ್ತನ ಹೆಸರು ಮಾತ್ರ 'ಪರ್ವತದ ಒಡೆಯ' 4
7. ಜತೆಜತೆಯಲ್ಲಿಯೇ ಇರುವ ಅವರ ನಿರ್ಧಾರಕ್ಕೆ ಎಳ್ಳು ನೀರು ಬಿಟ್ಟರೇ? 4
9. ಬರೀ ಬಳಸು ದಾರಿಯ ಈ ಕ್ರಮವನ್ನು ಸರಳಗೊಳಿಸು 4
12. ಪ್ರತಿ ಸಂವತ್ಸರದಲ್ಲೂ ತುಂಬಿ ನಿಲ್ಲುವ ಶುದ್ಧ ನೀರಿನ ಭಾರೀ ಜಲಾವಾರ 4
14. ಮುಗ್ಗರಿಸುತ್ತಿದ್ದವನನ್ನು ಕಾಪಾಡಿದವ ಕೃಷ್ಣ ತಾನೇ? 3
15. ಕಬಳಿಸಿದ್ದು ಪೂರ್ಣವಾಯಿತು; ಮುಂದೆ? 3
16. ತೊಳೆದಲ್ಲೆಲ್ಲ ತೇಲುತ್ತಲೇ ಇದೆ ನೋಡಿ ಎಳ್ಳೆಣ್ಣೆ 4

ಮೇಲಿನಿಂದ ಕೆಳಕ್ಕೆ

1. ಸರ್ವರ ಮತಿಗೂ ಹಿತವಾಗಿ ಕೇಳಿಸಿದ್ದು ಅದಾವ ಸಂಗೀತ ರಾಗ? 4
2. ಮೂರ್ಖರ ಗ್ರಹಿಕೆಗೆ ಅತಿಯಾದೀತು ಇಂಥ ಕೈಚಳಕ 4
3. ಕೇವಲ ಕಷ್ಟಗಳನ್ನೇ ಕೇಳಿ ಕೇಳಿ ಆತ ಚಿಂತಾಕ್ರಾಂತ 3
5. ಜೊತೆಗಾರರನ್ನೆಲ್ಲ ತ್ಯಜಿಸಿ ಬಂದ ನೋಡಿ ಆತನ ಮಗ 3
6. ಸಂಚರಿಸಲೆಂದು ಒಟ್ಟುಗೂಡಿದವರ ಗುಂಪನ್ನು ಕರಗಿಸು 4
8. ಲೇಪಿಸುವ ತಂತ್ರ ಕುರಿತು ಹೇಳಿದ್ದನ್ನೆಲ್ಲ ಬರೆದವ ಯಾರು? 4
10. ಮೃಗಾಲಯಕ್ಕೆ ಹೋಗುವ ಜನರ ವರ್ತನೆಯ ಮೇಲೆ ಬಿಗಿ ನಿಯಂತ್ರಣ 3
11. ಪ್ರತಿ ತರಗತಿಯಲ್ಲೂ ಸುಪ್ರಸಿದ್ಧರೆಲ್ಲರ 'ಒಳ್ಳೆಯ ಮುನ್ನಡೆ' 4
12. ಸಂಭ್ರಮವೇನೂ ಬೇಕಿಲ್ಲ; ಆ ಎಲ್ಲರದೂ ಹೆಚ್ಚು ಕಡಿಮೆ ಇಲ್ಲದ ಶಕ್ತಿ 4
13. ಕರ್ತವ್ಯಕ್ಕೆ ಬದ್ಧನಾಗಿರುವ ವ್ಯಾಪಾರಿ ಗೊತ್ತೇ? 3

### 03–02–2022 ಉತ್ತರಗಳು

ಎಡದಿಂದ ಬಲಕ್ಕೆ

1. ಪ್ರಸಾಧನ 3. ಮಾರಣ 4. ಗಡವ 6. ವನಚರ 7. ಕವನ 9. ಕನಸು 11. ತಬಲ 13. ತಿಲಕ 15. ಕಾರಾಗೃಹ 17. ದುಮ್ಮಾನ 18. ವರಾತ 19. ಕಳವಳ

ಮೇಲಿನಿಂದ ಕೆಳಕ್ಕೆ

1. ಪ್ರಣವ 2. ನಗರಿ 3. ಮಾರ್ದವ 5. ವಸನ 7. ಕರಗತ 8. ನವಕಾಲ 9. ಕರಾಮತಿ 10. ಸುಧಾರಕ 12. ಬರಡು 14. ಲಲಿತ 15. ಕಾನಕ 16. ಹವಳ

ಪ್ರಶ್ನಾಂಕಣ

# 'ಇಂದ್ರಿ'ಯ ಗಾಯನ: ಏನು ವಿಸ್ಮಯ?

ಇಂದ್ರಿ (Indri): ಅದೊಂದು ಲೀಮರ್ (ಚಿತ್ರ1) ಪ್ರೈಮೇಟ್‌ಗಳ ವರ್ಗಕ್ಕೇ ಎಂದರೆ ಸಸ್ತನಿ ವರ್ಗದ ಮನುಷ್ಯ, ವಾನರರು, ಮಂಗಗಳು, ಲೋರಿಸ್, ಟಾರ್ಸಿಯರ್ ಇತ್ಯಾದಿ ಪ್ರಾಣಿಗಳ ವರ್ಗಕ್ಕೇ, ಲೀಮರ್‌ಗಳೂ ಸೇರಿವೆ. ಲೀಮರ್‌ಗಳಲ್ಲಿ ಸುಮಾರು ಒಂದು ನೂರು ಪ್ರಭೇದಗಳಿವೆ (ಚಿತ್ರಗಳಲ್ಲಿ ನೋಡಿ). ಇಡೀ ಧರೆಯಲ್ಲಿ ಲೀಮರ್‌ಗಳೆಲ್ಲ ಆಫ್ರಿಕಾ ಖಂಡದ ಆಗ್ನೇಯಕ್ಕಿರುವ 'ಮಡಗಾಸ್ಕರ್' ದ್ವೀಪದಲ್ಲಿ (ಚಿತ್ರ4 ರಲ್ಲಿ ಗಮನಿಸಿ) ಮಾತ್ರ ನೆಲೆಸಿವೆ. ಇಲಿಗಳಷ್ಟೇ ಗಾತ್ರದಿಂದ ಮಂಗಗಳವರೆಗೆ ಅವುಗಳ ಗಾತ್ರಾಂತರ. ಹಲವಾರು ಸದಸ್ಯರ ಗುಂಪುಗಳಲ್ಲಿ ಅವುಗಳ ಬದುಕು.

ಹಲವಾರು ಪ್ರಾಣಿಗಳಂತೆಯೇ ಕೆಲವು ಲೀಮರ್ ಪ್ರಭೇದಗಳು ಕೂಡ ಬಹು ಬಗೆಯ, ಅತಿ ಸಂಕೀರ್ಣ ಧ್ವನಿ ವೈವಿಧ್ಯವನ್ನು ಪಡೆದಿವೆ. ತಮ್ಮ ಧ್ವನಿಯನ್ನು, ತಮ್ಮ ಗಂಟಲಿನ ಸ್ವರಗಳನ್ನು ಅವು ವಿವಿಧ ಉದ್ದೇಶಗಳಿಗೆ ಬಳಸುತ್ತವೆ: ಗುಂಪಿನ ಎಲ್ಲ ಸದಸ್ಯರೂ ಸಂಪರ್ಕದಲ್ಲಿರಲು, ಶತ್ರುಗಳ ಆಗಮನನಿರ್ಗಮನಗಳನ್ನು ಇಡೀ ಗುಂಪಿಗೆ ತಿಳಿಸಲು, ತಮ್ಮ ಸರಹದ್ದನ್ನು ಅನ್ಯ ಗುಂಪುಗಳಿಗೆ ಘೋಷಿಸಲು... ಇತ್ಯಾದಿ. ಗುಡುಗು ಮೊಳಗಿದಾಗ, ಸಿಡಿಲು ಬಡಿದಾಗ... ವಿಮಾನಗಳು ಹಾರಿಹೋದಾಗಲೂ ಲೀಮರ್‌ಗಳು ನಾನಾ ಧ್ವನಿ ತೆಗೆಯುತ್ತವೆ. ಅಡವಿಗಳಲ್ಲಿ ಲೀಮರ್‌ಗಳ ಧ್ವನಿ ಎರಡು ಕಿಲೋಮೀಟರ್ ದೂರದವರೆಗೂ ಕೇಳಿಸುತ್ತದೆ.

ಇಡೀ ಲೀಮರ್‌ಗಳ ಗುಂಪಿನಲ್ಲೇ ಅನನ್ಯವಾದ 'ಗಾಯನ' ಪ್ರತಿಭೆಯನ್ನು 'ಇಂದ್ರಿ' ಪಡೆದಿದೆ. ಪರಮ ವಿಸ್ಮಯ ಏನೆಂದರೆ ಇಂದ್ರಿಗಳ ಗಾಯನ 'ತಾಳ ಬದ್ಧ'ವೂ ಆಗಿದೆ ಎಂಬ ಅಂಶ ಇತ್ತೀಚೆಗೆ ಶೋಧಗೊಂಡಿದೆ! ಈ ಅದ್ಭುತ ಪ್ರತಿಭೆಯಿಂದಾಗಿ ಲೀಮರ್‌ಗಳು 'ಲಯಬದ್ಧ ಗಾಯನದ ಮಾನವೇತರ ಏಕೈಕ ಪ್ರೈಮೇಟ್' ಎಂಬ ಖ್ಯಾತಿಗೆ ಭಾಜನವಾಗಿವೆ!




ಒಂಟೊಂಟಿಯಾಗಿಯೂ, ಸಾಮೂಹಿಕವಾಗಿಯೂ ಪ್ರತಿನಿತ್ಯ ಮಡಗಾಸ್ಕರ್‌ನ ಅರಣ್ಯಗಳಲ್ಲಿ ಹಲವು ಬಾರಿ ನಡೆಯುವ ಇಂದ್ರಿಗಳ 'ಸಂಗೀತ ಕಚೇರಿ'ಯ ಲಯ ವೈಶಿಷ್ಟ್ಯ ಏನೆಂದರೆ ಅವುಗಳ ಹಾಡಿನ ಸ್ವರಗಳು 'ಎರಡು ಕಾಲ'ಗಳಲ್ಲಿರುತ್ತವೆ. ಹಾಗೆಂದರೆ, ಲಯದ ಪ್ರತಿ ಏಟಿಗೆ ಒಂದು ಸ್ವರ ಇರುವ (ಸ ರಿ ಗ ಮ ದಂತೆ) ಒಂದನೆಯ ಕಾಲ ಮತ್ತು ತಾಳದ ಪ್ರತಿ ಏಟಿಗೆ ಎರಡು ಸ್ವರಗಳು ಬರುವ (ಸರಿ ಗಮ ಸರಿ ಗಮ ದಂತೆ) ಎರಡನೆಯ ಕಾಲ ಹೀಗೆ ಲಯಬದ್ಧ ಎರಡು ಕಾಲಗಳಲ್ಲಿ ಹಾಡುವುದು ಇಂದ್ರಿಗಳ ಗಾಯನದ ಪರಮ ವಿಸ್ಮಯ. ಅಷ್ಟೇ ಅಲ್ಲದೆ ಇಂದ್ರಿಗಳು ತಮ್ಮ ಗಾಯನವನ್ನು 'ಸ್ವರ ಸ್ಥಾಯಿ'ಗಳನ್ನು (ಮಂದ್ರ ಮಧ್ಯ ತಾರ) ಬದಲಿಸುತ್ತಲೂ ಹಾಡುತ್ತವೆ ಎಂಬುದು ಅವುಗಳ ಮತ್ತೊಂದು ವಿಸ್ಮಯ.

■ ಎನ್. ವಾಸುದೇವ್